ಕರ್ನಾಟಕ ಸರ್ಕಾರ

ಸಂಖ್ಯೆ:ಸಿಆಸುಇ 149 ಸೇನೆನಿ 2010

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ:18.10.2010.

## ಅಧಿಕೃತ ಜ್ಞಾಪನ

ವಿಷಯ: ರಾಜ್ಯ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ ನೇರ ನೇಮಕಾತಿ ಮಾಡುವಾಗ ಅಭ್ಯರ್ಥಿಗಳ ನಡತೆ ಮತ್ತು ಪೂರ್ವಚರಿತ್ರೆಯನ್ನು ಪರಿಶೀಲಿಸುವ ಬಗ್ಗೆ ಮತ್ತು ಪರೀಕ್ಷಾರ್ಥ ಅವಧಿಯನ್ನು ಪೂರೈಸಿದ ಬಗ್ಗೆ ಸಕಾಲದಲ್ಲಿ ಆದೇಶವನ್ನು ಹೊರಡಿಸುವ ಬಗ್ಗೆ.

ಉಲ್ಲೇಖ: 1)ದಿನಾಂಕ 29.10.1959ರ ಅಧಿಕೃತ ಜ್ಞಾಪನ ಸಂಖ್ಯೆ:ಜಿಎಡಿ (ಎಸ್1)77 ಎಸ್ಆರ್ಆರ್ 59.
2)ದಿನಾಂಕ 10.11.1967ರ ಅಧಿಕೃತ ಜ್ಞಾಪನ ಸಂಖ್ಯೆ:ಜಿಎಡಿ 112 ಎಸ್ಆರ್ಆರ್ 67.
3)ದಿನಾಂಕ 14.4.1978ರ ಸರ್ಕಾರಿ ಆದೇಶ ಸಂಖ್ಯೆ:ಡಿಪಿಎಆರ್ 35 ಎಸ್ಆರ್ಆರ್ 77.
4)ದಿನಾಂಕ 27.11.2002ರ ಅಧಿಕೃತ ಜ್ಞಾಪನ ಸಂಖ್ಯೆ: ಸಿಆಸುಇ 60 ಸೇನೆನಿ 2002.

–0–

ಕರ್ನಾಟಕ ಸಿವಿಲ್ ಸೇವೆಗಳು (ಸಾಮಾನ್ಯ ನೇಮಕಾತಿ) ನಿಯಮಗಳು, 1977ರ ನಿಯಮ 10ರನ್ವಯ ರಾಜ್ಯ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ ನೇರ ನೇಮಕಾತಿ ಮಾಡುವಾಗ ಅಭ್ಯರ್ಥಿಯ ನಡತೆ ಹಾಗೂ ಪೂರ್ವಚರಿತ್ರೆ ಬಗ್ಗೆ ಹಾಗೂ ಮೇಲ್ಕಂಡ ನಿಯಮಗಳ ನಿಯಮ 12ರನ್ವಯ ಅಭ್ಯರ್ಥಿಯ ದೇಹದಾರ್ಢ್ಯತೆ ಬಗ್ಗೆ ಪರಿಶೀಲಿಸಿ, ಆಯ್ಕೆಯಾದ ಅಭ್ಯರ್ಥಿಯು ನೇರ ನೇಮಕಾತಿ ಹೊಂದಲು ಎಲ್ಲಾ ರೀತಿಯಲ್ಲೂ ಸೂಕ್ತವಾಗಿದ್ದಾನೆ ಎಂದು ನೇಮಕಾತಿ ಪ್ರಾಧಿಕಾರಕ್ಕೆ ಮನವರಿಕೆಯಾಗದ ಹೊರತು, ಅಂತಹ ಅಭ್ಯರ್ಥಿಯನ್ನು ರಾಜ್ಯ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ ನೇಮಕ ಮಾಡುವಂತಿಲ್ಲ.

2) ರಾಜ್ಯ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ ಅನಪೇಕ್ಷಿತ ಅಭ್ಯರ್ಥಿಗಳು ನೇಮಕ ವಾಗುವುದನ್ನು ತಪ್ಪಿಸುವ ಉದ್ದೇಶದಿಂದ ರಾಜ್ಯ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ ನೇಮಕಾತಿ ಮಾಡುವಾಗ ಅಭ್ಯರ್ಥಿಗಳ ನಡತೆ ಹಾಗೂ ಪೂರ್ವಚರಿತ್ರೆ (Character and Antecedents)ಯನ್ನು ಪರಿಶೀಲಿಸುವ ಬಗ್ಗೆ ದಿನಾಂಕ 29.10.1959, 10.11.1997 ಮತ್ತು ದಿನಾಂಕ 27.11.2002ರ ಉಲ್ಲೇಖದ ಅಧಿಕೃತ ಜ್ಞಾಪನಗಳಲ್ಲಿ ವಿವರವಾಗಿ ಮಾರ್ಗಸೂಚನೆಗಳನ್ನು ನೀಡಲಾಗಿರುತ್ತದೆ.

3) ರಾಜ್ಯ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ ಆಯ್ಕೆಯಾದ ಅಭ್ಯರ್ಥಿಗಳ ನಡತೆ, ಪೂರ್ವಚರಿತ್ರೆ (Character and Antecedents)ಯನ್ನು ಪರಿಶೀಲಿಸದೆ ಹಾಗೂ ಅವರ ದೇಹದಾರ್ಢ್ಯತೆ ಬಗ್ಗೆ ವೈದ್ಯಕೀಯ ಪರೀಕ್ಷೆಯನ್ನು ನಡೆಸದೇ, ಅವುಗಳನ್ನು ಬಾಕಿ ಇಟ್ಟು ಕೆಲವು ನೇಮಕಾತಿ ಪ್ರಾಧಿಕಾರಗಳು ಆಯ್ಕೆಯಾದ ಅಭ್ಯರ್ಥಿಗಳನ್ನು ನೇಮಕಾತಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ನೇಮಕಾತಿ ಪ್ರಾಧಿಕಾರಗಳು ಮಾಡುವ ಈ ಲೋಪದಿಂದ ರಾಜ್ಯ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ ಅನಪೇಕ್ಷಿತ ಅಭ್ಯರ್ಥಿಗಳು ನೇಮಕಗೊಳ್ಳುವ ಸಾಧ್ಯತೆ ಇರುವುದರಿಂದ ಇಂತಹ ಲೋಪಕ್ಕೆ ಅವಕಾಶ ಮಾಡಬಾರದೆಂದು ಮಾನ್ಯ ಸರ್ವೋಚ್ಚ ನ್ಯಾಯಾಲಯವು ಸಿವಿಲ್ ಅಪೀಲು ಸಂಖ್ಯೆ: 596/2007 – Khazia Mohammed Muzammil Vs The State of Karnataka and Another ಪ್ರಕರಣದಲ್ಲಿ ದಿನಾಂಕ 8.7.2010ರಂದು ನೀಡಿರುವ ತೀರ್ಪಿನಲ್ಲಿ ಒತ್ತಿ ಹೇಳಿದೆ.

4) ಮೇಲ್ಕಂಡ ತೀರ್ಪಿನಲ್ಲಿ ನೇರನೇಮಕಾತಿ ವಿಧಾನದಿಂದ ನೇಮಕಗೊಂಡ ನೌಕರರ ಪರೀಕ್ಷಾರ್ಥ ಅವಧಿಯು ಮುಕ್ತಾಯವಾದ ನಂತರ ವಿಳಂಬವಿಲ್ಲದೆ ಅವರು ಪರೀಕ್ಷಾರ್ಥ ಅವಧಿಯನ್ನು ತೃಪ್ತಿಕರವಾಗಿ ಪೂರೈಸಿದ ಬಗ್ಗೆ ಆದೇಶ ಹೊರಡಿಸಬೇಕೆಂದು ಸೂಚಿಸಲಾಗಿದೆ. ಒಂದು ವೇಳೆ ಪರೀಕ್ಷಾರ್ಥ ಅವಧಿಯಲ್ಲಿರುವ ನೌಕರರು ನೇಮಕಗೊಂಡ ಹುದ್ದೆಗೆ ಸೂಕ್ತರಲ್ಲದಿದ್ದಲ್ಲಿ ಅಥವಾ ಅವರು ನಿಗದಿತ ಇಲಾಖಾ ಪರೀಕ್ಷೆಗಳನ್ನು ಪಾಸು ಮಾಡದಿದ್ದಲ್ಲಿ ಕರ್ನಾಟಕ ನಾಗರಿಕ ಸೇವಾ (ಪ್ರೊಬೇಷನ್) ನಿಯಮಾವಳಿ, 1977ರ ನಿಯಮ 5 ಮತ್ತು 6ರ ಉಪಬಂಧಗಳಿಗೊಳಪಟ್ಟು ಅವರನ್ನು ಸೇವೆಯಿಂದ ವಿಮುಕ್ತಿಗೊಳಿಸಲು ಕ್ರಮ ಕೈಗೊಳ್ಳಬೇಕು. ಪರೀಕ್ಷಾರ್ಥ ಅವಧಿಯಲ್ಲಿ ನೌಕರರ ಕಾರ್ಯನಿರ್ವಹಣೆಯ ಮೌಲ್ಯಮಾಪನಕ್ಕೆ ಅವರ ವಾರ್ಷಿಕ ಕಾರ್ಯನಿರ್ವಹಣಾ ವರದಿಗಳು ಮುಖ್ಯವಾದ ಆಧಾರವಾಗುವುದರಿಂದ ಸಂಬಂಧಿತ ಪ್ರಾಧಿಕಾರಗಳು ಈ ವರದಿಗಳನ್ನು ನಿಗದಿತ ಕಾಲಾವಧಿಯಲ್ಲಿ ಕರ್ನಾಟಕ ನಾಗರಿಕ ಸೇವಾ (ಕಾರ್ಯನಿರ್ವಹಣಾ ವರದಿಗಳು) ನಿಯಮಗಳು 2000ದನ್ವಯ ಬರೆಯುವ ಅಗತ್ಯವನ್ನು ಸಹ ಸರ್ವೋಚ್ಚ ನ್ಯಾಯಾಲಯದ ಮೇಲ್ಕಂಡ ತೀರ್ಪಿನಲ್ಲಿ ಒತ್ತಿ ಹೇಳಲಾಗಿದೆ.

5) ರಾಜ್ಯ ಸಿವಿಲ್ ಸೇವೆಗೆ ನೇರನೇಮಕಾತಿ ವಿಧಾನದಲ್ಲಿ ನೇಮಕಗೊಂಡ ಅಭ್ಯರ್ಥಿಗಳನ್ನು ನೇಮಕ ಮಾಡುವಾಗ ಮತ್ತು ಅವರು ಪರೀಕ್ಷಾರ್ಥ ಅವಧಿಯಲ್ಲಿರುವಾಗ ಮತ್ತು ಆ ಅವಧಿಯು ಮುಕ್ತಾಯವಾದ ನಂತರ ಮೇಲ್ಕಂಡಂತೆ ಅಗತ್ಯ ಕ್ರಮ ಕೈಗೊಳ್ಳುವಂತೆ ಸಂಬಂಧಿತರೆಲ್ಲರಿಗೆ ಈ ಮೂಲಕ ಸೂಚಿಸಲಾಗಿದೆ.

(ಸಹಿ)
(ಎಸ್.ವಿ. ರಂಗನಾಥ್)
ಸರ್ಕಾರದ ಮುಖ್ಯ ಕಾರ್ಯದರ್ಶಿ

ಆಯುಕ್ತರ ಕಛೇರಿ,ಸಾರ್ವಜನಿಕ ಶಿಕ್ಷಣ ಇಲಾಖೆ,ಹೊಸ ಸಾರ್ವಜನಿಕ ಕಛೇರಿಗಳು,ನೃಪತುಂಗ ರಸ್ತೆ,ಬೆಂಗಳೂರು
ಸಂಖ್ಯೆ:ಸಿ5(5)ಖಾ.ಪೂ.ಘೋ: 05:2010-11 ದಿನಾಂಕ:03-11-2010

ಮೇಲ್ಕಂಡ ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ:ಸಿಆಸುಇ 149 ಸೆನೆವಿ 2010 ದಿನಾಂಕ:18.10.2010 ನ್ನು ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಅಧೀನ ಕಛೇರಿಗಳಿಗೆ ಕಳುಹಿಸುತ್ತಾ, ಸರ್ಕಾರದ ಸುತ್ತೋಲೆಯಲ್ಲಿನ ಸೂಚನೆಯನ್ನು ಕಟ್ಟುನಿಟ್ಟಾಗಿ ಪಾಲಿಸಲು ತಿಳಿಸಲಾಗಿದೆ.ನೇಮಕಾತಿ ಪ್ರಾಧಿಕಾರಿಗಳು ಅವರುಗಳ ವ್ಯಾಪ್ತಿಯಲ್ಲಿ ಪ್ರತಿ ತಿಂಗಳಲ್ಲಿ ಘೋಷಿಸಬೇಕಾಗಿರುವ ಖಾಯಂ ಪೂರ್ವ ಸೇವಾವಧಿ ಪ್ರಕರಣಗಳನ್ನು ನಿಗಾ ವಹಿಯಲ್ಲಿ (Watch registor) ನಿರ್ವಹಿಸಿ ಸೇವೆ ತೃಪ್ತಿಕರವಾಗಿಲ್ಲದ ಹಾಗೂ ನಿಗಧಿತ ಅವಧಿಯಲ್ಲಿ ಇಲಾಖಾ ಪರೀಕ್ಷೆಯಲ್ಲಿ ಉತ್ತೀರ್ಣರಾಗದ ನೌಕರರನ್ನು ಸುತ್ತೋಲೆಯ ಕಂಡಿಕೆ(4)ರಲ್ಲಿ ನಿರ್ದೇಶಿಸಿದಂತೆ ಸೇವೆಯಿಂದ ವಿಮುಕ್ತಿಗೊಳಿಸಲು ಕ್ರಮವಹಿಸತಕ್ಕದ್ದೆಂದು ಸೂಚಿಸಲಾಗಿದೆ.

(ಸಹಿ)
(ಕೆ.ಕೃಷ್ಣಪ್ರಸಾದ)
ಜಂಟಿ ನಿರ್ದೇಶಕರು(ಆಡಳಿತ)
ಆಯುಕ್ತರ ಪರವಾಗಿ

3/11/2010

ಗೆ
1.ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಹಾಗೂ ಗುಲ್ಬರ್ಗಾ
2.ನಿರ್ದೇಶಕರು(ಪ್ರಾಥಮಿಕ ಶಿಕ್ಷಣ) ಮತ್ತು ನಿರ್ದೇಶಕರು(ಪ್ರೌಢಶಿಕ್ಷಣ) ಆಯುಕ್ತರ ಕಛೇರಿ,ಬೆಂಗಳೂರು
3.ನಿರ್ದೇಶಕರು,ಉರ್ದು ಮತ್ತುಇತರ ಅಲ್ಪ ಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯ,ಬೆಂಗಳೂರು
4.ನಿರ್ದೇಶಕರು, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು-3.
5.ನಿರ್ದೇಶಕರು,ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ,ಹೊಸಕೆರೆಹಳ್ಳಿ,ಬನಶಂಕರಿ,ಬೆಂಗಳೂರು-85
6.ವ್ಯವಸ್ಥಾಪಕ ನಿರ್ದೇಶಕರು.ಕರ್ನಾಟಕ ಪಠ್ಯ ಪುಸ್ತಕ ಸಂಘ(ರಿ), ಹೊಸಕೆರೆಹಳ್ಳಿ,ಬನಶಂಕರಿ,ಬೆಂಗಳೂರು-85
7.ಜಂಟಿ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ,ಮೈಸೂರು ವಿಭಾಗ,ಬೆಳಗಾಂ ವಿಭಾಗ,ಗುಲ್ಬರ್ಗಾ ವಿಭಾಗ
8.ಜಂಟಿ ನಿರ್ದೇಶಕರು, ಮಧ್ಯಾಹ್ನ ಉಪಹಾರ ಯೋಜನೆ ಕೆ.ಜಿ.ರಸ್ತೆ,ಬೆಂಗಳೂರು
9.ಪ್ರಾಂಶುಪಾಲರು, ಸಿ.ಟಿ.ಇ. ಮೈಸೂರು, ಮಂಗಳೂರು, ಚಿತ್ರದುರ್ಗ, ಗುಲ್ಬರ್ಗ, ಬೆಳಗಾವಿ, ಬೆಳಗಾಂ,
10..ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು
11.ರಾಜ್ಯದ ಎಲ್ಲಾ ಡಯಟ್ ಪ್ರಾಂಶುಪಾಲರು
12.ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು
13.ಆಯುಕ್ತರ ಕಛೇರಿಯ ಎಲ್ಲಾ ಶಾಖಾಧಿಕಾರಿಗಳು ಹಾಗೂ ಅಧೀಕ್ಷಕರು

Copy of the letter No.FD 49 SRS 80, dated 20th August, 1980 of the Secretary to the Government of Karnataka, Finance Department to the Accountant General, Karnataka, Bangalore-1.

Subject: Increments during the period of Probation-
Regulation of.

& & &

With reference to your letter No.GM/Cel 1/KCSRs(XIII)/158, dated 22-07-1980 on the subject cited above, I am directed to state that there is no bar to release the increments falling due within the prescribed period of probation in view of the provision of sub-rule(1) of Rule 10 of the K.C.S.R. (Probation) Rules 1977. Hence a second increment which may fall due within the prescribed period of probation may be admitted even without the declaration of satisfactory completion of probation. But in view of the amendment to the K.C.S.R. (probation) Rules 1977 issued in Government Notification No.DPAR 65 SSR 78, dated 18-04-1980, no increment accruing during the extended period of probation can be admitted.

Sd/-

G.N.HONAVAR,
Under Secretary to Government.
Finance Department
(Expenditure-IV)

ನೈಜಪ್ರತಿ

19/2/12

Assistant Director (Admn)
Office of the Commissioner
for Publice Instruction
BANGALORE - 560 001